# ಮಹಾಗುರು!

ಪ್ರವೀಣ ಕುಲಕರ್ಣಿ



ಅಮೆರಿಕದಲ್ಲಿ ಅತ್ಯಂತ ಕಡಿಮೆ ಸಂಬಳದ ವೃತ್ತಿ ಯಾವುದು? ಈ ಪ್ರಶ್ನೆಗೆ ಎಲ್ಲ ನಿಟ್ಟಿನಿಂದ ಸಿಗುವ ಸಾಮಾನ್ಯ ಉತ್ತರ 'ಅರಿಜೋನಾ ಪ್ರಾಂತ್ಯದ ಶಿಕ್ಷಕರದು' ಎನ್ನುವುದು. ಜೀವನ ನಿರ್ವಹಣೆಯೇ ಕಷ್ಟವಾಗಿ ಈ ಪ್ರಾಂತ್ಯದಲ್ಲಿ ಹಲವರು ಶಿಕ್ಷಕ ವೃತ್ತಿಯನ್ನೇ ತೊರೆಯುತ್ತಿದ್ದಾರೆ. ಇನ್ನು ಕೆಲವರು ಹಣದುಬ್ಬರದ ಹೊಡೆತದಿಂದ ತಮ್ಮನ್ನು ತಾವು ಸಂರಕ್ಷಿಸಿಕೊಳ್ಳಲು ಎರಡನೇ ಉದ್ಯೋಗದ ಮೊರೆಹೋಗುತ್ತಿದ್ದಾರೆ. ಆದರೆ, ಎಲ್ಲ ಕಷ್ಟಗಳ ನಡುವೆ ಮಕ್ಕಳ ಮೇಲಿನ ಪ್ರೀತಿಯಿಂದ ಶಿಕ್ಷಕ ವೃತ್ತಿಗೇ ತಮ್ಮನ್ನು ಸಮರ್ಪಿಸಿಕೊಂಡವರೂ ಇದ್ದಾರೆ. ಕರೀಂ ನೀಲ್ ಅಂಥವರಲ್ಲಿ ಒಬ್ಬರು.

ಮನೆ ಬಾಡಿಗೆ, ಜೀವನದ ಅಗತ್ಯ ವಸ್ತುಗಳ ಖರೀದಿ ಮತ್ತು ಕಾರು ಸಾಲದ ಕಂತು ತುಂಬುವಷ್ಟರಲ್ಲಿ ಶಿಕ್ಷಕರ ಕಿಸೆಯೆಲ್ಲ ಖಾಲಿ ಆಗುವುದಂತೆ. ಹುಷಾರು ತಪ್ಪಿದರೆ, ಬೇರೆ ಏನಾದರೂ ಖರ್ಚು ಬಂದರೆ ಕೈಯಲ್ಲಿ ದುಡ್ಡೇ ಇರುವುದಿಲ್ಲ ಎನ್ನುವುದು ಬಹುತೇಕ ಶಿಕ್ಷಕರ ದೂರು. 'ಸಮಸ್ಯೆ ಆಗಿರುವುದು ನಿಜ. ನಾನೀಗ ಸಿನಿಮಾಕ್ಕೆ ಹೋಗುವುದನ್ನು ನಿಲ್ಲಿಸಿದ್ದೇನೆ. ಹೊರಗೆ ಊಟಕ್ಕೆ ಹೋಗುವುದಕ್ಕೂ ಬ್ರೇಕ್ ಬಿದ್ದಿದೆ. ಪ್ರವಾಸಕ್ಕೆ ಹೋಗಿ ಎಷ್ಟೋ ದಿನಗಳಾಗಿವೆ' ಎಂದು ಕರೀಂ ಹೇಳುತ್ತಾರೆ. ಅಮೆರಿಕ, ಸದ್ಯ ನಾಲ್ಕು ದಶಕಗಳಲ್ಲಿಯೇ ಅತ್ಯಂತ ಗಾಢ ಪರಿಣಾಮ ಬೀರುತ್ತಿರುವ ಹಣದುಬ್ಬರಕ್ಕೆ ಸಾಕ್ಷಿಯಾಗಿದೆ. ಶಿಕ್ಷಕ ವೃತ್ತಿಗೆ ರಾಜೀನಾಮೆ ಕೊಡುವವರ ಸಂಖ್ಯೆಯೂ ದಿನೇ ದಿನೇ ಹೆಚ್ಚುತ್ತಿದೆ.

ಕರೀಂ, ಪಾಠ ಮಾಡುವುದು ಕೂಡ ಅಂಗವಿಕಲ ಮಕ್ಕಳಿಗೆ. ಅವರಿಗೆ ಪರಿಣಾಮಕಾರಿಯಾಗಿ ಪಾಠಗಳನ್ನು ಮನದಟ್ಟು ಮಾಡಿಸಲು ಭಿನ್ನ ಪ್ರಯೋಗಗಳಿಗೆ ಕೈಹಾಕಿರುವ ಅವರು, ಅಂಗವಿಕಲ ಮಕ್ಕಳ ನೆಚ್ಚಿನ ಮೇಷ್ಟ್ರಾಗಿದ್ದಾರೆ. ಅವರ ಕ್ಲಾಸ್‌ರೂಮ್ ಎಂದರೆ, ಅದು ಹಲವು ವಿಶಿಷ್ಟ ಸಲಕರಣೆಗಳ ಭಿನ್ನ ಪ್ರಯೋಗಶಾಲೆ. ಹಾಗೆಯೇ ವೈಯಕ್ತಿಕವಾಗಿ ಆರಾಮದಾಯಕ ಜೀವನ ನಡೆಸಬೇಕು ಎನ್ನುವ ಆಸೆಯಲ್ಲಿ ಅವರು ಅದುಮಿಟ್ಟುಕೊಂಡವರಲ್ಲ. ಒಂದೊಳ್ಳೆಯ ಅಪಾರ್ಟ್‌ಮೆಂಟ್‌ನಲ್ಲಿ ಬಾಡಿಗೆಗೆ ಇರಬೇಕು ಎನ್ನುವುದು ಅವರ ಹಲವು ವರ್ಷಗಳ ಕನಸು. ಕೆಲವೇ ತಿಂಗಳ ಹಿಂದೆಯಷ್ಟೇ ಅವರು ಅಪಾರ್ಟ್‌ಮೆಂಟ್‌ವೊಂದಕ್ಕೆ ಸ್ಥಳಾಂತರಗೊಂಡಿದ್ದಾರೆ. ಹಣದುಬ್ಬರದ ಪರಿಣಾಮ ಬಾಡಿಗೆ ದರವೂ ಹೆಚ್ಚಾಗಿದೆ. ಬೇರೆ ಉದ್ಯೋಗಗಳ ಅವಕಾಶಗಳು ಒದಗಿಬಂದರೂ ಶಿಕ್ಷಕ ವೃತ್ತಿಯ ಮೇಲಿನ ಪ್ರೀತಿಯಿಂದ ಅಂತಹ ಅವಕಾಶಗಳನ್ನೆಲ್ಲ ನಿರಾಕರಿಸಿ ಶಾಲಾ ಅಂಗಳದಲ್ಲಿಯೇ ಗಟ್ಟಿಯಾಗಿ ನಿಂತವರು ಅವರು.

ಶಿಕ್ಷಕ ವೃತ್ತಿಯಲ್ಲಿ ಅವರು ನಡೆಸಿದ ಭಿನ್ನ ಭಿನ್ನ ಪ್ರಯೋಗಗಳು ಅಮೆರಿಕ ಮಾತ್ರವಲ್ಲದೆ ಜಗತ್ತಿನ ಹಲವು ದೇಶಗಳ ಗಮನವನ್ನೂ ಸೆಳೆದಿವೆ. ಅಂಗವಿಕಲ ಮಕ್ಕಳ ಊನಗಳನ್ನು ಮೆಟ್ಟಿನಿಲ್ಲಲು ಅವು ಸಹಕಾರಿಯಾಗಿವೆ. ಪ್ರತಿಷ್ಠಿತ 'ನ್ಯಾಷನಲ್ ಟೀಚರ್ಸ್ ಹಾಲ್ ಆಫ್ ಫೇಮ್'ನ ಸದಸ್ಯರಾಗುವ ಗೌರವವೂ ಅವರಿಗೆ ದೊರೆತಿದೆ. ಬೋಧನಾ ಸಾಮಗ್ರಿಗಳ ಪ್ರಯೋಗಗಳಿಗೆ ಅವರು ತುಂಬಾ ವ್ಯಯಿಸುವುದುಂಟು. ಅದಕ್ಕೆ ಬೇಕಾಗುವ ಹಣವನ್ನು ಅವರು ಹೇಗೆ ಹೊಂದಿಸಿಕೊಳ್ಳುತ್ತಾರೆ ಗೊತ್ತೆ? ರಾತ್ರಿಯ ಹೊತ್ತು ಶೇರ್ ಡ್ರೈವರ್ ಆಗಿ ಕಾರ್ಯ ನಿರ್ವಹಿಸುತ್ತಾರೆ. ನೈಟ್‌ಕ್ಲಬ್‌ಗಳಲ್ಲಿ ಬೌನ್ಸರ್ ಕೆಲಸ ಮಾಡಲೂ ಅವರು ಹಿಂಜರಿಯುವುದಿಲ್ಲ. ಇತ್ತೀಚೆಗೆ ಉತ್ಸಾಹ ತುಂಬುವ ಕೋಚ್ ಆಗಿಯೂ ದುಡಿಯುತ್ತಿದ್ದಾರೆ.

ಹೌದು, ಎಲ್ಲರಂತೆಯೇ ನಾನೂ ಒಂದು ಸ್ವಂತ ಮನೆಯನ್ನು ಹೊಂದಬೇಕು. ನಿವೃತ್ತಿ ದಿನಗಳಿಗೆ ಬೇಕಾಗುವಂತೆ ಒಂದಿಷ್ಟು ಮೊತ್ತವನ್ನೂ ಎತ್ತಿಟ್ಟುಕೊಳ್ಳಬೇಕು. ಆದರೆ, ದುಡಿದ ಮೊತ್ತ ನನ್ನ ಜೀವನದ ನಿರ್ವಹಣೆ ಹಾಗೂ ಬೋಧನೆಯ ಪ್ರಯೋಗಗಳಿಗೇ ಸಾಲುತ್ತಿಲ್ಲ ಎಂದವರು ನೋವು ತೋಡಿಕೊಳ್ಳುತ್ತಾರೆ. ಜನಸ್ನೇಹಿಯಾದ ಶಿಕ್ಷಣ ವ್ಯವಸ್ಥೆಯನ್ನು ಸರ್ಕಾರಕ್ಕೆ ಇದುವರೆಗೆ ಜಾರಿಗೊಳಿಸಲು ಸಾಧ್ಯವಾಗಿಲ್ಲ. ಶಿಕ್ಷಕರಿಗೆ ಹೆಚ್ಚಿನ ವೇತನ ನೀಡುವುದಾಗಿ ಪ್ರತಿಸಲ ಚುನಾವಣೆ ಬಂದಾಗಲೂ ರಾಜಕಾರಣಿಗಳು ಹುಸಿ ಭರವಸೆ ನೀಡುತ್ತಲೇ ಇರುತ್ತಾರೆ, ಏನು ಮಾಡುವುದು ಎಂದು ಕರೀಂ ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

ಕರೀಂ ಅವರ ಸಮರ್ಪಣಾಭಾವದ ಅರಿವಾಗಬೇಕಾದರೆ ಅವರ ಶಾಲೆಯ ಸ್ಥಿತಿಯ ಮಾಹಿತಿಯನ್ನು ನೀವೊಮ್ಮೆ ಅವಲೋಕಿಸಬೇಕು. ಅವರ ಶಾಲೆಯಲ್ಲಿ ಅರ್ಧಕ್ಕಿಂತ ಹೆಚ್ಚು ಶಿಕ್ಷಕರು ವೃತ್ತಿಯನ್ನೇ ತೊರೆದಿದ್ದಾರೆ. ಅರಿಜೋನಾ ಪ್ರಾಂತ್ಯದ ಶಿಕ್ಷಕರ ಹುದ್ದೆಗಳಲ್ಲಿ ಶೇ. 30ರಷ್ಟು ಖಾಲಿ ಬಿದ್ದಿವೆ. ಕೊರತೆಯನ್ನು ತುಂಬಲು ಫಿಲಿಪ್ಪೀನ್ಸ್‌ದಿಂದ ಜನರನ್ನು ಕರೆತರಲಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಶಿಕ್ಷಕ ವೃತ್ತಿಯನ್ನೇ ಬಲವಾಗಿ ನಂಬಿ, ಅಂಗವಿಕಲ ಮಕ್ಕಳ ಭವಿಷ್ಯಕ್ಕೆ ಬೆಳಕಾಗಿರುವ ಕರೀಂ ವಿಶಿಷ್ಟವಾಗಿ ನಿಲ್ಲುತ್ತಾರೆ. ನಮ್ಮಲ್ಲೂ ಇಂತಹ ಶಿಕ್ಷಕರ ಸಂತತಿ ಎಲ್ಲೆಡೆ ತುಂಬಿದ್ದು, ಕರೀಂ ಅಂಥವರು ಇಲ್ಲಿಯೂ ಇದ್ದಾರಲ್ಲವೇ?

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65